ಎಂ ವಿ ಸಿ ನಂ. 1466/2022
ಪಿ ಡಬ್ಲು 1

ದಿನಾಂಕಃ 25-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಂ ಟಿ ಹೆಚ್ ವಕೀಲರಿಂದ .**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಶಿರಹಟ್ಟಿ ಪಿ ಎಸ್ ಕ್ರೈ ನಂ.95/2021 ರ ಪ್ರ.ವ.ವ. ಮತ್ತು ದೂರಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು, ಅದೇ ರೀತಿ ಅಪರಾಧ ಸ್ಥಳದ ಪಂಚನಾಮೆ ಮತ್ತು ವಾಹನ ಜಪ್ತಿ ಪಂಚನಾಮೆ, ಸ್ಥಳ ನಕ್ಷೆ ಇವುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-5 ಎಂದು, ಕೀಮ್ಸ ಆಸ್ಪತ್ರೆ ಹುಬ್ಬಳ್ಳಿ ಇವರ ಡಿಸ್‌ಚಾರ್ಜ ಕಾರ್ಡ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-6 ಎಂದು, ಮೋಟಾರು ವಾಹನ ಅಪಘಾತ ವರದಿ, ದೋಷಾರೋಪಣೆ ಪಟ್ಟಿಯ ದೃಢೀಕೃತ ನಕಲು, ಸುಮಂಗಲಾ ದಳವಾಯಿ ಇವರ ಹೇಳಿಕೆ, ವೋಲ್ವೊ ವಾಹನದ ಆಯಾ ದಿನದ ನಿವೇದನೆ ಪತ್ರ, ಕರ್ತವ್ಯ ದೃಢೀಕರಣ ಪತ್ರ, ವಾಹನದ ಆರ್‌ಸಿ ಇವುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ ನಿಪಿ-12 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).